# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಆಟೋಮೆಟಿಕ್ ಐಡೆಂಟಿಫಿಕೇಶನ್ ಸಿಸ್ಟಮ್ ಉಪಕರಣಗಳಿಗೆ ಮೆರಿಟೈಮ್ ಮೊಬೈಲ್ ಸ್ಟೇಶನ್ ಲೈಶನ್ಸ್ ನವೀಕರಿಸುವ ಕುರಿತು- ಆದೇಶ.

**ಓದಲಾಗಿದೆ.** ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: ಸಂಗ್ರಹ-2(3)49/2016-17, ದಿನಾಂಕ: 22.06.2020.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ, ಸಿಎಸ್ ಪಿ ಘಟಕದ 12 ಬೋಟ್ ಗಳಿಗೆ ಅಳವಡಿಸಿರುವ ಆಟೋಮೆಟಿಕ್ ಐಡಂಟಿಪಿಕೇಶನ್ ಸಿಸ್ಟಮ್ (ಎಐಎಸ್) ಉಪಕರಣಗಳಿಗೆ ಮೆರಿಟೈನ್ ಮೊಬೈಲ್ ಸ್ಟೇಶನ್ ಲೈಸೆನ್ಸ್ ನ್ನು Monastery of communication Department of Telecommunication, Wireless Planning & Co-Ordination Regional Licensing Office (SR) IMS Campus, Chennai ಸಂಸ್ಥೆ ರವರಿಗೆ ಆನ್ ಲೈನ್ ಮುಖಾಂತರ ಪಾವತಿಸಿ ನವೀಕರಿಸಲು ಮೊತ್ತ ರೂ.14,83,392/- ಗಳನ್ನು ಎಸಿ ಬಿಲ್ ನಲ್ಲಿ ಡ್ರಾ ಮಾಡಲು ಹಾಗೂ Department of Telecommunication Chennai ರವರಿಗೆ ಆನ್ ಲೈನ್ ಮುಖಾಂತರ ಸಂದಾಯ ಮಾಡುವ ಕುರಿತು ಅನುಮತಿ ನೀಡಲು ಕೋರಿರುತ್ತಾರೆ.

ಒಂದು ಬೋಟ್ ಗೆ ರೂ.1,18,616/- ರಂತೆ 12 ಬೋಟ್ ಗಳಿಗೆ ರೂ.14,23,392/- ಗಳಾಗುತ್ತದೆ. ಆದರೆ ಶಾರ್ಟ್ ಟರ್ಮ್ ಪರ್ಮಿಟ್ (ಎಸ್ ಟಿಪಿ) ರಿನಿವಲ್ ಬಗ್ಗೆ ಪ್ರತಿ ತಿಂಗಳಿಗೆ ರೂ.5,000/- ಹೆಚ್ಚುವರಿಯಾಗಿ ಭರಿಸಬೇಕಾಗಿರುವುದಾಗಿ ತಿಳಿಸಿರುತ್ತಾರೆ. ಕಾರಣ, ಈಗಾಗಲೇ 03 ತಿಂಗಳು ಆಗಿರುವುದರಿಂದ, ಪ್ರತಿಯೊಂದು ಬೋಟ್ ಗೆ ರೂ.5,000/- ಗಳಂತೆ ಸೇರಿಸಿ ಒಂದು ಬೋಟ್ ಗೆ ಲೈಸೆನ್ಸ್ ನವೀಕರಿಸಲು ರೂ.1,23,616/- ಗಳ ವೆಚ್ಚ ತಗಲುತ್ತಿದ್ದು, ಒಟ್ಟು 12 ಬೋಟ್ ಗಳಿಗೆ ರೂ.14,83,392/- ಗಳಾಗುತ್ತದೆಂದು ತಿಳಿಸಿರುತ್ತಾರೆ.

ಈ ವೆಚ್ಚವನ್ನು 2020-21ನೇ ಸಾಲಿಗೆ ಆಂತರಿಕ ಭದ್ರತಾ ವಿಭಾಗ ಹಾಗೂ ಅದರ ಅಧೀನದಲ್ಲಿ ಬರುವ ಘಟಕಗಳ ಮೂಲಭೂತ ಸೌಕರ್ಯ ಕುರಿತು ರೂ.930.00 ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ 2055-00-118-0-01-051 ಸಾಮಾನ್ಯ ವೆಚ್ಚದಡಿಯಲ್ಲಿ ತೆಗೆದಿರಿಸಲಾಗಿ, ಸದರಿ ವೆಚ್ಚವನ್ನು ಭರಿಸಲಾಗುವುದೆಂದು ತಿಳಿಸಿರುತ್ತಾರೆ.

ಅದರಂತೆ, ಸಿಎಸ್ ಪಿ ಘಟಕದ 12 ಬೋಟ್ ಗಳಿಗೆ ಅಳವಡಿಸಿರಿರುವ ಅಟೋಮೆಟಿಕ್ ಐಡೆಂಟಿಫಿಕೇಶನ್ ಸಿಸ್ಟಮ್ (ಎಐಎಸ್) ಉಪಕರಣಗಳಿಗೆ ಮೆರಿಟೈಮ್ ಸ್ಟೇಷನ್ ಲೈಸೆನ್ಸ್ ನ್ನು ನವೀಕರಿಸಲು ತಗಲುವ ಒಟ್ಟು ಮೊತ್ತ ರೂ.14,83,392/- ಗಳನ್ನು Department of Telecommunication Chennai ರವರಿಗೆ ಸಂದಾಯ ಮಾಡಲು ಎಸಿ ಬಿಲ್ ಮುಖಾಂತರ ಡ್ರಾ ಮಾಇ http://bharathkosh.gov.in ಗೆ ಆನ್ ಲೈನ್ ಮುಖಾಂತರ ಪಾವತಿಸುವ ಕುರಿತು ಹಾಗೂ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ -2055-00-118-0-01-051 ಸಾಮಾನ್ಯ ವೆಚ್ಚದ ಅಡಿಯಲ್ಲಿ 2020-21ನೇ ಸಾಲಿಗೆ ಬಿಡುಗಡೆ ಮಾಡಿರುವ ಅನುದಾನದಲ್ಲಿ ಭರಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 63 ಇಎಫ್‌ಎಸ್ 2020,**

**ಬೆಂಗಳೂರು, ದಿನಾಂಕ: 25/ಸೆಪ್ಟಂಬರ್/2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಂತರಿಕ ಭದ್ರತಾ ವಿಭಾಗದ ಸಿ.ಎಸ್.ಪಿ ಘಟಕಗಳ 12 ಬೋಟ್ ಗಳಿಗೆ ಅಳವಡಿಸಿರುವ ಆಟೋಮೆಟಿಕ್ ಉಪಕರಣಗಳಿಗೆ ಲೈಸೆನ್ಸನ್ನು ನವೀಕರಿಸಲು Department of Telecommunication Chennai ಇವರಿಗೆ ಪಾವತಿಸಬೇಕಾದ ರೂ.14.83,392/- ಗಳನ್ನು (ರೂಪಾಯಿ ಹದಿನಾಲ್ಕು ಲಕ್ಷ ಎಂಬತ್ತ್ಮೂರು ಸಾವಿರದ ಮೂರು ನೂರ ತೊಂಬತ್ತೆರಡು ಮಾತ್ರ) ಪಾವತಿಸಲು ಎ.ಸಿ. ಬಿಲ್ಲಿನಲ್ಲಿ ಸೆಳೆಯಲಾದ ಮೊತ್ತಕ್ಕೆ ಸಂಬಂಧಿಸಿದ ಡಿ.ಡಿ.ಓ ರವರು ಎಂ.ಸಿ.ಇ ನಿಯಮಗಳನುಸಾರ 30 ದಿನಗಳೊಳಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸುವ ಷರತ್ತಿನೊಂದಿಗೆ ಎ.ಸಿ. ಬಿಲ್ಲಿನಲ್ಲಿ ಸೆಳೆಯಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಈ ವೆಚ್ಚವನ್ನು 2020-21ನೇ ಸಾಲಿನ ಲೆಕ್ಕಶೀರ್ಷಿಕೆ 2055-00-118-0-01-051 ಸಾಮಾನ್ಯ ವೆಚ್ಚಗಳ ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 302 ವೆಚ್ಚ-11/2020, ದಿನಾಂಕ: 11/09/2020 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

25/9/2020
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329 /5369, ಬೆಂಗಳೂರು-560 001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.

5. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ, ರಿಚ್ ಮಂಡ್ ರಸ್ತೆ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
7. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ವಿಶೇಷಾಧಿಕಾರಿ (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನಸೌಧ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.